# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ಯಹೋಶುವನು ಅಧಿಕಾರವನ್ನು ವಹಿಸಿಕೊಂಡನು

ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯಹೋಶುವನಿಗೆ ತಿಳಿದಿತ್ತು ಮೋಶೆಯು ಸತ್ತ
ನಂತರ ಆತನೇ ಇಸ್ರಾಯೇಲ್ಯರ ನಾಯಕನೆಂದು.
ಸೈನ್ಯವನ್ನು ಸಿದ್ಧ ಪಡಿಸುವ ಮೊದಲು
ಯಹೋಶುವನು ತನ್ನನ್ನು ತಾನೆ ಸಿದ್ಧ
ಪಡಿಸಿಕೊಂಡನು. ‘ಜನರು ದೇವರ ಮಾತಿಗೆ
ವಿಧೇಯರಾಗುವುದಾದರೆ ವಾಗ್ದಾನದ
ದೇಶದಲ್ಲಿ ಅವರಿಗೆ ಅಭಿವೃದ್ಧಿ
ಮತ್ತು ಜಯವನ್ನು
ಕೊಡುತ್ತೆನೆಂದು’
ದೇವರು ವಾಗ್ದಾನ
ಮಾಡಿದ್ದನು.





ಜಿಢಿಣ ಥಿಚಿಣಣಟಜ
ತಿಔಣಟಜ ಥಿಜ
ಜಿಔಣರುಿಣ ಣುಿಜಡಿಜ.
೨೦೦೪ ‘ನಾವು
ನಿನ್ನನ್ನು ಹಿಂಬಾಲಿಸಿ
ದೇವರ ವಾಕ್ಯಕ್ಕೆ
ವಿಧೇಯರಾಗುತ್ತವೆಂದು’
ಇಸ್ರಾಯೇಲ್ಯರು
ಯಹೋಶವನಿಗೆ
ವಾಗ್ದಾನ ಮಾಡಿದರು.



ಯೆರಿಕೋ
ಪಟ್ಟಣದಲ್ಲಿರುವ
ರಕ್ಷಣ ಬಲವನ್ನು
ತಿಳಿದುಕೊಳ್ಳವುದಕ್ಕಾಗಿ
ಹೊಸ ನಾಯಕರನ್ನು
ಆರಿಸಿ, ಅವರನ್ನು
ಗೂಢಚಾರರನ್ನಾಗಿ
ಕಳಿಸಿಕೊಟ್ಟನು.
ಇಸ್ರಾಯೇಲ್ಯರು ತಮ್ಮ
ಮೊದಲ ಯುದ್ದವನ್ನು
ಇಲ್ಲೆ ಮಾಡುವರು.



ಒಬ್ಬನು ಯೆರಿಕೋದ ಅರಸನಿಗೆ ‘ಪಟ್ಟಣವನ್ನು ತಿಳಿದುಕೊಳ್ಳುವದಕ್ಕೆ ಗೂಢಚಾರರು ಬಂದಿದ್ದಾರೆಂದು’ ತಿಳಿಸಿದನು. ತನ್ನ ಸೈನಿಕರನ್ನು ಅವರನ್ನು ಹುಡುಕಲು ಕಳುಹಿಸಿದನು. ಕೂಡಲೆ ರಾಹೆಬಳ ಮನೆಯ ಬಾಗಿಲನ್ನು ತಟ್ಟಿದರು. ಅಲ್ಲಿ ಗೂಢಚಾರರು ಉಳಿದುಕೊಂಡಿದ್ದರು. ಆಗ ಅವಳು ಗೂಢಚಾರರನ್ನು ಅಡಗಿಸಿದಳು.

ಸೈನಿಕರು ಹೋದ ನಂತರ ಅವಳು ಹಿಂದಿನ ಬಾಗಿಲಿಂದ ಅವರನ್ನು ಕಳುಹಿಸಿದಳು. ಏಕೆ ಅವಳು ಗೂಢಚಾರರಿಗೆ ಸಹಾಯ ಮಾಡಿದಳು? ಕಾರಣವೆನೆಂದರೆ ದೇವರು ಅವರ ಸಂಗಡ ಇದ್ದಾರೆ ಎಂದು ಅವಳು ತಿಳಿದುಕೊಂಡಿದ್ದಳು. ನಾಶನದ ಸಮಯದಲ್ಲಿ ಅವಳು ಮತ್ತು ಅವಳ ಮನೆಯವರು ಉಳಿಯಬೇಕಾಗಿದೆ ಆ ಕಾರಣದಿಂದ ಅವಳು ಅವರಿಗೆ ಸಹಾಯ ಮಾಡಿದಳು, ಆ ಗೂಢಚಾರರು ಅವಳು ಮತ್ತು ಅವಳ ಮನೆಯವರನ್ನು ಉಳಿಸುತ್ತೇವೆಂದು ವಾಗ್ದಾನ ಮಾಡಿದರು.



ಯೆರಿಕೋವನ್ನು ಮುಟ್ಟುವ ಮೊದಲು ಇಸ್ರಾಯೇಲ್ಯರು ವಾಗ್ದಾನ ದೇಶವಾದ ಕಾನಾನಗೆ ಹೋಗುವಾಗ ಯೋರ್ದಾನ್ ಹೊಳೆಯನ್ನು ದಾಟಬೇಕಾಗಿತ್ತು ಆಗ ಅಲ್ಲಿ ಯಾವ್ರೂದೇ ಸೇತುವೆ ಇರಲ್ಲಿಲ್ಲ. ಅವರು ಅದನ್ನು ಹೇಗೆ ದಾಟಿದರು?



ದಶಾಜ್ಞೆ ಇರುವಂತ ದೇವರ ಮಂಜೂಷವನ್ನು ಹೊತ್ತುಕೊಂಡ ಯಾಜಕರು ಸೈನಿಕರನ್ನು ಮುನ್ನಡೆಸಬೇಕೆಂದು ಯಹೋಶವನು ತಿಳಿಸಿದನು. ಮಂಜೂಷವನ್ನು ಹೊತ್ತುಕೊಂಡ ಯಾಜಕರು ಹೊಳೆಯ ಅಂಚನ್ನು ಕಾಲಿನಿಂದ ಮೆಟ್ಟಿದಾಕ್ಷಣ ದೇವರು ಒಂದು ದೊಡ್ಡ ಅದ್ಭುತವನ್ನು ಮಾಡಿದನು. ಅದೇನೆಂದರೆ, ಆ ಹೊಳೆಯ ನೀರು ಬತ್ತಿಹೋಗಿ ಒಣಗಿದ ನೆಲವಾಯಿತು.



ಎಲ್ಲಾರು ಸುರಕ್ಷಿತವಾಗಿ ದಾಟಿದ ನಂತರ,
ಅಲ್ಲಿ ೧೨ ದೊಡ್ಡ ಕಲ್ಲುಗಳನ್ನು ನಟ್ಟಿದರು ಮತ್ತು
೧೨ ಕಲ್ಲುಗಳನ್ನು ಕಾನನಿನ ಗುರುತಾಗಿಟ್ಟರು.
ಕಾರಣವೆನೆಂದರೆ ಮುಂದೆ ಬರವಂತ
ಮಕ್ಕಳಿಗೆ ದೇವರು ಹೇಗೆ ಪ್ರೀತಿಯಿಂದ
ಪರಿಪಾಲಿಸಿದನೆಂದು ತಿಳಿಸುವುದಕ್ಕಾಗಿ
ಜ್ಞಾಪಕಾರ್ಥಕವಾಗಿ ಇಡಲ್ಪಟ್ಟಿದೆ.





ಯೆರಿಕೋ ಪಟ್ಟಣವು ಬಲವಾದ,
ದಪ್ಪವಾದ ಮತ್ತು ಎತ್ತರವಾದ
ಗೋಡೆಯಿಂದ ಕಟ್ಟಿರಿವುದರಿಂದ
ಯಹೋಶವನು ಅದನ್ನು ಹೇಗೆ
ಅಕ್ರಮಿಸಬೇಕೆಂದು ಯೋಜನೆಯನ್ನು
ಹಾಕಿಕೊಂಡನು. ದೇವರು ಪರಲೋಕ
ಸೈನ್ಯದ ನಾಯಕನನ್ನು ಕಳಿಸಿದನು.
ಹೊಸ ನಾಯಕನ ಜೋತೆ ಇದ್ದು
ಯುದ್ದದಲ್ಲಿ ಹೇಗೆ ಜಯ
ಹೊಂದಬೇಕೆಂದು ದೇವರು
ಮಾರ್ಗವನ್ನು ಮಾಡಿದನು.



ಯೆರಿಕೋವನ್ನು ಹೇಗೆ ಆಕ್ರಮಿಸಬೇಕೆಂದು ದೇವರು ಯಹೋಶುವನಿಗೆ ತಿಳಿಸಿದರು. ಅದು ವಿಚಿತ್ರವಾದ ಯೋಜನೆಯಾಗಿತ್ತು. ಆ ಪಟ್ಟಣದ ಸುತ್ತಲು ದೇವಜನರು ದಿನಕ್ಕೆ ಒಂದು ಸಾರಿಯಂತೆ ಆರು ದಿನ ಸುತ್ತಬೇಕು. ಆದರೆ ಏಳನೆ ದಿನ ಏಳನೆ ಸಾರಿ ಸುತ್ತುವಾಗ ತುತ್ತೂರಿಯನ್ನು ಊದಬೇಕು ಮತ್ತು ಜೋರಾಗಿ ಕೂಗಬೇಕು ಆಗ ಆ ಪಟ್ಟಣವು ಬಿದ್ದು ಹೋಗುತ್ತದೆ ಎಂದು ಹೇಳಿದನು.

ದೇವರು ಹೇಳಿದಂತೆ ಯಹೋಶುವ ಮತ್ತು ಆತನ ಸೈನ್ಯದವರು ಮಾಡಿದರು. ಅದನ್ನು ನೋಡಿದ ಯೆರಿಕೋದವರು ನಕ್ಕರು, ಏಳನೆ ದಿನ ಏಳನೆ ಸಾರಿ ಸುತ್ತುವಾಗ ಯಾಜಕರು ತುತ್ತೂರಿಯನ್ನು ಊದಿದರು ಮತ್ತು ಜೋರಾಗಿ ಕೂಗಿದರು. ಆಗ ದೇವರು ಹೇಳಿದಂತೆ



ಆ ಪಟ್ಟಣದ ಎತ್ತರವಾದ ಗೋಡೆ ಬಿದ್ದು ಹೋಯಿತು.







ಆ ಸಮಯದಲ್ಲಿ ರಾಹೆಬಳು
ಮತ್ತು ಅವರ ಮನೆಯವರನ್ನು
ಆ ಘೋರವಾದ ನಾಶದಿಂದ
ತಪ್ಪಿಸಿ, ಉಳಿದೆಲ್ಲಾವನ್ನು ದೇವರ
ಅಪ್ಪಣೆಯಂತೆ ಯೆರಿಕೋವನ್ನು
ನಾಶಮಾಡಿದರು.



ಆ ಯೆರಿಕೋ ಪಟ್ಟಣದಲ್ಲಿರುವಂತ
ಎಲ್ಲಾ ಬೆಳ್ಳಿ ಬಂಗಾರವನ್ನು ದೇವರಿಗಾಗಿ
ಯಹೋಶುವನು ಮಿಸಲಾಗಿಟ್ಟನು ಮತ್ತು
ಪುನ: ಆ ಪಟ್ಟಣವನ್ನು ಯಾರು ತಿರುಗಿ ಕಟ್ಟದಂತೆ ಅದನ್ನು
ಶಪಿಸಿದನು. ಯೆರಿಕೋ ಪಟ್ಟಣವನ್ನು ಯಹೋಶುವನು
ಹೇಗೆ ಸೋಲಿಸಿದನೆಂಬ ಸುದ್ದಿಯನ್ನು ಕಾನಾನ್ಯನರು ಕೇಳಿ
‘ದೇವರು ಅವರ ಸಂಗಡ ಇದ್ದನೆಂದು’ ತಿಳಿದಕೊಂಡರು.

# ಯೆಹೋಶುವನು ಅಧಿಕಾರವನ್ನು ವಹಿಸಿಕೊಂಡನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಯೆಹೋಶವ, 1–6**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16